


ಶೂದ್ರತಪಸ್ವಿ' ನಾಟಕದ ಮೂಲಕ ಆಧುನಿಕ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಮೊದಲ ದೊಡ್ಡ ಸಂಪ್ರದಾಯಭಂಗ ಮಾಡಿದ ಕುವೆಂಪು

ಹೊರಕ್ಕೆ ಬರುತ್ತಿದೆ" ಎಂದು ಹೇಳಿದ್ದರು. ಇಲ್ಲಿ "ಕನ್ನಡತನದ ಕೆಚ್ಚು... ಇಂಗ್ಲಿಶ್ ಸಾಹಿತ್ಯದ ಪ್ರಭಾವದಲ್ಲಿ ಹೊರಕ್ಕೆ ಬರುತ್ತಿದೆ" ಎಂಬ ಮಾತನ್ನು ಮನದಟ್ಟುಮಾಡಿಕೊಳ್ಳಬೇಕು. ಬಸವಲಿಂಗಪ್ಪನವರು ತಮ್ಮ ಭಾಷಣದಲ್ಲಿ "ಕನ್ನಡ ಅಭಿಮಾನ ಇರಬೇಕು. ಕನ್ನಡದಲ್ಲಿ ಮಾತನಾಡಬೇಕು. ಕನ್ನಡವನ್ನು ಬೆಳೆಸಬೇಕು" ಎಂದು ಹೇಳಿದ್ದರಾದರೂ, ಪತ್ರಿಕಾ ತಲೆಬರಹವಾಗಿದ್ದು ಮಾತ್ರ "ಕನ್ನಡ ಪುಸ್ತಕ ಓದುವುದರಿಂದ ವಿಚಾರ ಶಕ್ತಿ ದೇಶಪ್ರೇಮ ಬರದು..." ಎಂದು. ವರದಿಯಲ್ಲಿ "ಕನ್ನಡ ಅಭಿಮಾನ ಇರಬೇಕು, ಕನ್ನಡ ಮಾತನಾಡಬೇಕು. ಕನ್ನಡ ಬೆಳೆಸಬೇಕು ಎಂದು ಕರ್ನಾಟಕ ಏಕೀಕರಣ ಸಮಿತಿ ಕಾರ್ಯದರ್ಶಿಯಾಗಿ ಕೆಲಸ ಮಾಡಿರುವ ಬಸವಲಿಂಗಪ್ಪ ಹೇಳಿದರು. ಆದರೆ, ಇಂಗ್ಲಿಷ್ ಓದುವುದರಿಂದ ವಿಚಾರಶಕ್ತಿ, ಸ್ವತಂತ್ರ ಮನೋಭಾವ, ದೇಶಪ್ರೇಮ, ಎಲ್ಲಾ ಬರುತ್ತದೆ" ಎಂದು ವಿವರಿಸಿದರು" ಎಂದು ಪ್ರಕಟವಾಗಿತ್ತು. ಮೇಲೆ ಉಲ್ಲೇಖಿಸಿದ ಶ್ರೀಯವರ ಭಾಷಣದ ಸಾಲುಗಳನ್ನೂ, ಬಸವಲಿಂಗಪ್ಪನವರ ಭಾಷಣದ ಸಾಲುಗಳನ್ನೂ ಮತ್ತೆ ಮತ್ತೆ ಓದಿಕೊಂಡರೆ, ತುಂಬ ದೊಡ್ಡ ಅರ್ಥವ್ಯತ್ಯಾಸವೇನೂ ಕಾಣುವುದಿಲ್ಲ. ಆದರೆ, ಸಾಮಾಜಿಕ ಏಣಿಶ್ರೇಣಿಯಲ್ಲಿ ಅವರಿಬ್ಬರ ಸ್ಥಾನಮಾನ ಏನಾಗಿತ್ತು ಅನ್ನುವುದು ಇಲ್ಲಿ ಮುಖ್ಯ ಪಾತ್ರ ವಹಿಸುತ್ತದೆ. ಅಲ್ಲದೆ, ಶ್ರೀಯವರ ಭಾಷಣದ ಐದು ದಶಕಗಳ ನಂತರ ಬಸವಲಿಂಗಪ್ಪನವರು ಭಾಷಣ ಮಾಡಿದ್ದನ್ನು ಗಮನಿಸಿದರೆ, ಆ ದಶಕಗಳಲ್ಲೇ ಆಧುನಿಕ ಕನ್ನಡ ವಿಪುಲ ಸಾಹಿತ್ಯವನ್ನು ಸೃಷ್ಟಿಸಿದ್ದು. ನವೋದಯ, ಪ್ರಗತಿಶೀಲ, ನವ್ಯ ಸಾಹಿತ್ಯ ಚಳವಳಿಗಳೂ ಘಟಿಸಿದ್ದು. ಆದರೆ, ಬಸವಲಿಂಗಪ್ಪನವರ ಒಂದೇ ಒಂದು ಹೇಳಿಕೆ ಅವೆಲ್ಲ ಚಳವಳಿಗಳನ್ನು ಮಾತ್ರವಲ್ಲ, ಸಾವಿರ ವರ್ಷಗಳ ಇಡೀ ಕನ್ನಡ ಸಾಹಿತ್ಯ ಸಂಸ್ಕೃತಿಯನ್ನು ವಿಮರ್ಶೆಗೊಳಪಡಿಸುತ್ತ ಹೊಸ ಸಾಹಿತ್ಯ ಚಳವಳಿಗೆ ಮಾತ್ರವಲ್ಲ, ಸಾಂಸ್ಕೃತಿಕ ಹಾಗೂ ರಾಜಕೀಯ ಚಳವಳಿಗಳಿಗೂ ಎಡೆ ಮಾಡಿಕೊಟ್ಟದ್ದರಿಂದ ನನಗೆ ಬಸವಲಿಂಗಪ್ಪನವರ ಹೇಳಿಕೆಯ ಪರಿಣಾಮ ಅಗಾಧವಾದುದೆಂದೇ ಅನ್ನಿಸುತ್ತದೆ. ಅದು ಘಟಿಸಿ, ಈ ನವೆಂಬರ್ 18ಕ್ಕೆ ಐದು ದಶಕಗಳು ಸಲ್ಲಲಿವೆಯಾದ್ದರಿಂದ ಈ ಪ್ರಬಂಧವನ್ನು ದಲಿತ